ಶ್ರೀ ಬಿ. ಪುಟ್ಟಸ್ವಾಮಿ.—ಅಲ್ಲಿ ಎಷ್ಟು ನಿರೀಕ್ಷಿಸಿತ್ತೋ ಅಷ್ಟು ಕೆಲಸ ನಡೆಯುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳ ವಿಸ್ತರಣೆ ಯೋಜನೆ ಪ್ರಕಾರ ಸರಿಯಾಗಿ ಕೆಲಸ ನಡೆಯುತ್ತಿದೆ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆಯ 'ಬಿ' ಮತ್ತು 'ಸಿ' ಭಾಗದ ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ತಿಳಿಸಿರುವ ಪೊಬಲಗಿನ ಪ್ಯೆಕಿ ಎಷ್ಟು ಖರ್ಚು ಮಾಡಿರುತ್ತೀರಿ ?

Sri Kadidal MANJAPPA.—Figures are not readily available.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡು ಅಭಿವೃದ್ಧಿ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದವರ ಸಲಹೆಯ ಬಗ್ಗೆ ನಮ್ಮ ಸರ್ಕಾರದವರು ಏನು ಮಾಡಿರುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಯೋಜನೆಯನ್ನು ಕಾರ್ಯಗತ ಮಾಡುವ ವಿಚಾರವನ್ನು ಆಯಾ ಸಂಸ್ಥಾನಗಳಿಗೇ ಬಿಟ್ಟಿರುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡು ಅಭಿವೃದ್ಧಿ ಬಗ್ಗೆ ಒಂದು ಯೋಜನೆಯ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಮಲೆನಾಡು ಅಭಿವೃದ್ಧಿ ಯೋಜನೆಗೆ ಸರ್ಕಾರದ ಪೂರ್ಣ ಸಹಕಾರ ನೀಡುವ ಅಭಿಪ್ರಾಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದ ಮಟ್ಟಿಗೂ ಸಹಕಾರ ನೀಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಬಿ. ಹುಚ್ಚೇಗೌಡ.—ಕಮ್ಯೂನಿಟಿ ಪ್ರಾಜೆಕ್ಟ್ ಗಾಗಿ ಒದಗಿಸಿರತಕ್ಕ ಹಣವನ್ನು ಮಲೆನಾಡು ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ ; ಕಮ್ಯೂನಿಟಿ ಪ್ರಾಜೆಕ್ಟನ್ನು ಎರಡು ತಾಲ್ಲೂಕುಗಳಲ್ಲಿ ಪ್ರಾರಂಭಿಸಿದೆ, ಬಾಕಿ ಕಡೆ ಹೆಲ್ತ್ ಯೂನಿಟ್ಸುಗಳನ್ನು ಸ್ಥಾಪಿಸಿದ್ದಾರೆ, ಆ ಮೇಲೆ ರೂರಲ್ ಕಮ್ಯೂನಿಕೇಷನ್‌ಗೆ ಒದಗಿಸಿದೆ.

ಶ್ರೀ ಬಿ. ಹುಚ್ಚೇಗೌಡ.—ಇದಕ್ಕೆಲ್ಲಾ ಕಮ್ಯೂನಿಟಿ ಪ್ರಾಜೆಕ್ಟ್‌ಗಾಗಿ ಒದಗಿಸಿರುವ ಫಂಡಿನಿಂದಲೇ ಹಣವನ್ನು ಖರ್ಚು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸವನ್ನು ಪ್ರಾರಂಭಿಸಿರುವ ಕಡೆ ಆ ಫಂಡಿನಿಂದ ಖರ್ಚು ಮಾಡಲಾಗುತ್ತದೆ; ಬಾಕಿ ಕಡೆಗಳಲ್ಲಿ ಬೇರೆ ಫಂಡಿನಿಂದ ಖರ್ಚು ಮಾಡುತ್ತಾರೆ.

Registration Office at Kottur

Q.—701. Sri KOTRA BASAVANA GOWD (Kudligi).—

Will the Government be pleased to state :—

(*a*) whether it is a fact that Madras Government contemplated to open a registration office at Kottur in view of heavy work ;

(*b*) whether they will take steps to open such office at Kottur in the near future ?

A.—Sri Kadidal MANJAPPA (Minister for Revenue and Public Works).—

(*a*) Yes.

It is reported that the question was considered in 1951 but was dropped.

(*b*) No.

ಶ್ರೀ ಕೊಟ್ರ ಬಸವನಗೌಡ.—ರಿಜಿಸ್ಟ್ರೇಷನ್ ಆಫೀಸ್ ಒಂದನ್ನು ಕೊಟ್ಟೂರಿನಲ್ಲಿ ತೆಗೆಯಬೇಕೆಂದು ಮದ್ರಾಸ್ ಸರ್ಕಾರದವರು ಯೋಚಿಸಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ ; ಆದರೆ ಅಲ್ಲಿಯ ಜಿಲ್ಲಾಧಿಕಾರಿಗಳ ವರದಿಯ ಪ್ರಕಾರ ಆ ಸ್ಥಳದಲ್ಲಿ ರಿಜಿಸ್ಟ್ರೇಷನ್ ಆಫೀಸ್ ಅನಾವಶ್ಯಕ, ಈಗ ನಂದೂರಿನಲ್ಲಿ ಒಂದು ರಿಜಿಸ್ಟ್ರೇಷನ್ ಆಫೀಸ್ ಪ್ರಾರಂಭವಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಕೊಟ್ರ ಬಸವನಗೌಡ.—ಕೂಡ್ಲಿಗಿಯ ಅರ್ಧ ಭಾಗದ ಜನರಿಂದ ಸಹ ಈ ಬಗ್ಗೆ ಒತ್ತಾಯ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಂದೂರಿನಲ್ಲಿ ರಿಜಿಸ್ಟ್ರೇಷನ್ ಆಫೀಸೊಂದನ್ನು ಪ್ರಾರಂಭಿಸಿರುವುದರಿಂದ, ಕೂಡ್ಲಿಗಿಯ ಕೆಲವು ಗ್ರಾಮಗಳು ಆ ಆಫೀಸಿಗೆ attach ಆಗಿರುವುದರಿಂದ ಈ ಬಗ್ಗೆ ಕೂಡ್ಲಿಗಿಯಲ್ಲಿ ಕೆಲಸ ಕಾರ್ಯಗಳು ಕಡಮೆಯಾಗುತ್ತವೆ.

ಶ್ರೀ ಎಸ್. ಪರಮೇಶ್ವರಪ್ಪ.—ಮದ್ರಾಸ್ ಸರ್ಕಾರದವರು ಸಹ ಈ ರಿಜಿಸ್ಟ್ರೇಷನ್ ಆಫೀಸು ಅಲ್ಲಿ ಅತ್ಯವಶ್ಯಕವೆಂದು ಪರಿಗಣಿಸಿದ್ದುದು ತಮಗೆ ಗೊತ್ತಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ ; 1951 ರಲ್ಲಿ ಇದನ್ನು ಅವರು ಪರಿಶೀಲಿಸಿ ಅನಂತರ ಈ ವಿಚಾರವನ್ನು ಅಲ್ಲಿಗೇ ಬಿಟ್ಟಿರುತ್ತಾರೆಂದು ತಿಳಿದು ಬಂದಿದೆ.

Jampadahalla Reservoir

Q.—733. Sri T. NAGAPPA (Tarikere).—

Will the Government be pleased to state :—

(*a*) how many times estimates have been prepared after conducting surveys for constructing a reservoir by putting an anecut across the Jampadahalla near kasaba Duggalapura village, Tarikere Taluk;

(*b*) the steps they have taken subsequently regarding the said project ;

(*c*) when they have decided to commence the work of this reservoir ?

A.—Sri Kadidal MANJAPPA (Minister for Revenue and Public Works).—

(*a*) Twice.